**ಸರ್ಕಾರಿ ಪ್ರೌಢಶಾಲೆ,ರೂಪನಗುಡಿ ಬಳ್ಳಾರಿ ಪೂರ್ವ ವಲಯ**

**ಹತ್ತನೆಯ ತರಗತಿಯ ಮಾದರಿ ಪ್ರಶ್ನೆ ಪತ್ರಿಕೆ–3**

**ಪ್ರಥಮ ಭಾಷೆ – ಸಿರಿ ಕನ್ನಡ**

**ಗರಿಷ್ಠ ಅಂಕಗಳು:100** **ಅವಧಿ:03: 00**

**ಸೂಚನೆಗಳು :** ಪ್ರಶ್ನೆ ಪತ್ರಿಕೆಯು ಎ. ಬಿ. ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ. ಉತ್ತರಗಳನ್ನು ನೇರವೂ, ಸ್ಪಷ್ಟವೂ ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ ಪ್ರತಿ ಪ್ರಶ್ನೆಗೂ ಉತ್ತರಕ್ಕಾಗಿ ಮೀಸಲಿಟ್ಟ ಜಾಗದಲ್ಲಿ ಉತ್ತರ ಬರೆಯುವುದು ಖಡ್ಡಾಯ.

**ವಿಭಾಗ – 'ಎ'**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **9*1=9**

1. ಅಮೇರಿಕಾದ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯ ಭಾಗಗಳು ಯಾವುವು?
2. ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು?
3. ಧರ್ಮಾಧಿಕರಣರು ವಟುವೃಕ್ಷದ ಸಮೀಪಕ್ಕೆ ಏಕೆ ಬಂದರು?
4. ಗೃಹಸ್ಥಾಶ್ರಮವುಧನ್ಯ ಎಂದು ಹೇಳಿದವರು ಯಾರು?
5. ಹಲಗಲಿಯ ನಾಲ್ವರು ವೀರಪ್ರಮುಖರು ಯಾರು ಯಾರು?
6. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?
7. ಹುಲಿಗೆ ಪರಮಾನಂದವಾಗಲು ಕಾರಣವೇನು?
8. ಅಜ್ಞಾನ ತೂಲಗಿಸಲು ಕವಯಿತ್ರಿ ಏನಾಗಬಯಸಿದ್ದಾರೆ?
9. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?

**ಈ ಕೆಳಗಿನವುಗಳಿಗೆ ಮೂರು–ನಾಲ್ಕು ವಾಕ್ಯದಲ್ಲಿ ಉತ್ತರ ಬರೆಯಿರಿ.** **10*2=20**

10. ಬುಕ್ಕರಾಯನು ನಡೆಸಿದ ಸಭೆಗೆ ಯಾರನ್ನೆಲ್ಲಾ ಆಹ್ವಾನಿಸಿದನು?
11. ಸಹಾನಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳಾವುವು?
12. ವೃಕ್ಷಸಾಕ್ಷಿ ಕತೆಯಲ್ಲಿ ನೀವು ಧರ್ಮಬುದ್ಧಿ ಮೆಚ್ಚಲು ಕಾರಣವೇನು>
13. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿರಿ?
14. ಹಲಗಲಿಯ ಬೇಡರು ದಂಗೆ ಹೇಳಲು ಕಾರಣವೇನು?
15. ಸಂಕಟಕ್ಕೆ ಗಡಿ ಇಲ್ಲ ಏಕೆ?
16. ಎಂಟನೇ ಒಗಟಿನ ಉತ್ತರ 'ಕೊಕ್ಕರೆ' ಎಂಬುದನ್ನು ಸಮರ್ಥಿಸಿ.
17. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ?
18. ಭರತ ಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ?
19. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **4*3=12**

20. "ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ"
21. "ಆದರ್ಶ ಪುರುಷರೊಬ್ಬರು ದಿವಾನುರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ"

22. "ನಿಷ್ಠೇ ಇಲ್ಲದ ಭಕ್ತ ಪಟ್ಟಣದಲ್ಲಿದ್ದಡ್ಡೂ ಅದು ನಟ್ಟಡವಿ"

23. "ಜಾನಕಿಯ ಮಗನಿದಕೆ ಬೆದರುವನೆ"

ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6

24. ದೇವನೂರ ಮಹಾದೇವ

25. ಕುಮಾರವ್ಯಾಸ

ಈ ಕೆಳಗಿನ ಪದ್ಯಭಾಗ ಪೂರ್ಣಗೊಳಿಸಿ ಬರೆಯಿರಿ 1*4=4

26. ಯುಗ ಯುಗಗಳ ____________________

________________________________________

________________________________________

____________________ ನೋಡಿದಿರಾ ? (4 ಸಾಲು)

ಅಥವಾ

ನೀಲಮೇಘ______________________________

________________________________________

________________________________________

____________________ ನೋಡಿದಿರಾ ? (4 ಸಾಲು)

ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1*4=4

27. ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

ಈ ಕೆಳಗಿನ ಪ್ರಶ್ನೆಗಳಿಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 2*4=8

28. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ದತೆಗಳನ್ನು ಹಾಗು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿರಿ.

ಅಥವಾ

ಶಬರಿಯು ರಾಮನ ದರ್ಶನದಿಂದ ಪಡೆದ ಸಂತೋಷದ ಪ್ರಸಂಗವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

29. ದುರ್ಯೋಧನನ ತಂದೆ-ತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.

ಅಥವಾ

ಸಂಧಿಯೇ ಉಚಿತವೆಂದು ದೃತರಾಷ್ಟ್ರನು ಹೇಗೆ ಸಮರ್ಥಿಸಿದನು?

ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 2*2=4

30. ಅಕ್ಕಮಹಾದೇವಿ ಕನ್ನಡದ ಪ್ರಸಿದ್ಧ ಕವಯಿತ್ರಿ. ಶರಣ ಚಳುವಳಿಯ ಪ್ರಮುಖರು, ಸ್ವಾಭಿಮಾನದ ಪ್ರತೀಕವಾಗಿದ್ದಾರೆ. ಸ್ತ್ರೀವಾದಿ ಚಳುವಳಿಯ ನಿಜವಾದ ಪ್ರತಿಪಾದಕಿ. ಚಿಕ್ಕವಯಸ್ಸಿನಲ್ಲೇ ಸಕಲ ಸುಖವನ್ನು ತ್ಯಜಿಸಿದ ಅಕ್ಕ. ಎದುರಿಸಿದ ಪರೀಕ್ಷೆಗಳು ಹಲವಾರು, ಸಾಕ್ಷಾತ್ ಶಿವ (ಮಲ್ಲಿಕಾರ್ಜುನ)ನನ್ನು ಪತಿ ಎಂದು ಸ್ವೀಕರಿಸಿ ಲೌಕಿಕ ಜೀವನವನ್ನು ಧಿಕ್ಕರಿಸಿ, ಕೇಶಾಂಬರೆಯಾಗಿ, ಹಲವಾರು ಭಕ್ತರಿಗೆ ಮಾದರಿಯಾಗಿದ್ದಾರೆ. ಶಿವಶರಣೆ ಅಕ್ಕಮಹಾದೇವಿ ಜನಿಸಿದ್ದು ಶಿವಮೊಗ್ಗ ಜಿಲ್ಲೆ. ಶಿಖಾರಿಪುರ–ಶಿರಾಳ ಕೊಪ್ಪದ ನಡುವೆ ಇರುವ 'ಉಡುತಡಿ' ಎಂಬ ಗ್ರಾಮದಲ್ಲಿ ತಂದೆ ನಿರ್ಮಲಶೆಟ್ಟಿ, ತಾಯಿ ಸುಮತಿ. ಕಲ್ಯಾಣದ ಕ್ರಾಂತಿಯಲ್ಲಿ ಭಾಗವಹಿಸಿದರು. 'ಚನ್ನಮಲ್ಲಿಕಾರ್ಜುನ' ಎಂಬ ಅಂಕಿತದಲ್ಲಿ ಅನೇಕ ವಚನಗಳನ್ನು ರಚಿಸಿದ್ದಾರೆ.

ಪ್ರಶ್ನೆಗಳು:

1. ಅಕ್ಕಮಹಾದೇವಿ ಜನನದ ಬಗ್ಗೆ ತಿಳಿಸಿರಿ.

2. ಅಕ್ಕನ ಜೀವನ ಸಾಧನೆಯನ್ನು ವಿವರಿಸಿ.

## ವಿಭಾಗ – 'ಬಿ'

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ. ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. 10*1=10

31. ಕಂಬನಿ ಪದದಲ್ಲಿ ಏರ್ಪಟ್ಟಿರುವ ಸಂಧಿ:

ಎ) ಆಗಮಸಂಧಿ ಬಿ) ವೃದ್ಧಿಸಂಧಿ ಸಿ) ಆದೇಶ ಸಂಧಿ ಡಿ) ಗುಣಸಂಧಿ.

32. ಕನ್ನಡ ವರ್ಣಮಾಲೆಯಲ್ಲಿಯ ಮಹಾಪ್ರಾಣಾಕ್ಷರಗಳ ಸಂಖ್ಯೆ.

ಎ) 34 ಬಿ) 10 ಸಿ) 25 ಡಿ) 9.

33. ಕ್ರಿಯಾ ಸಮಾಸ ಪದವಿದು:

ಎ) ಮೋಸಮಾಡು ಬಿ) ರಾಮಲಕ್ಷ್ಮಣ ಸಿ) ನಡುರಾತ್ರಿ ಡಿ) ಪೆರ್ಮರು.

34. 'ಪೂಜಾರಿ' ಎಂಬ ಪದವು ನಾಮಪದದ ಈ ಪ್ರಕಾರಕ್ಕೆ ಉದಾಹರಣೆ:

ಎ) ರೂಢನಾಮ ಬಿ) ಸರ್ವನಾಮ ಸಿ) ಅಂಕಿತನಾಮ ಡಿ) ಅನ್ವರ್ಥಕನಾಮ.

35. ಒಂದು ಪೂರ್ಣ ಕ್ರಿಯಾ ಪದದೊಂದಿಗೆ ನೇರವಾಗಿ ಅರ್ಥವನ್ನು ಕೊಟ್ಟರೆ. ಅ ವಾಕ್ಯವು:

ಎ) ಮಿಶ್ರವಾಕ್ಯ ಬಿ) ಸಾಮಾನ್ಯ ವಾಕ್ಯ ಸಿ) ಸಂಯೋಜಿತ ವಾಕ್ಯ ಡಿ) ಪ್ರಶ್ನಾರ್ಥಕ ವಾಕ್ಯ.

36. ಕ್ರಿಯಾಪದದ ಮೂಲ ರೂಪಕ್ಕೆ ಹೀಗೆನ್ನುವರು:

ಎ) ನಾಮಪ್ರಕೃತಿ ಬಿ) ಕರ್ಮಪದ ಸಿ) ಧಾತು ಡಿ) ಸರ್ವನಾಮ.

37. 'ಅನಾನಸು' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ:

ಎ) ಪೋರ್ಚುಗೀಸ್ ಬಿ) ಉರ್ದು ಸಿ) ಪರ್ಷಿಯನ್ ಡಿ) ಹಿಂದೂಸ್ತಾನಿ.

38. ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಚಿಹ್ನೆ ಬಳಸುತ್ತಾರೆ:

ಎ) ಪೂರ್ಣವಿರಾಮ ಬಿ) ಅಲ್ಪವಿರಾಮ ಸಿ) ಅರ್ಧವಿರಾಮ ಡಿ) ಉದ್ಧರಣ.

39. ಈ ಕೆಳಗಿನ ವಿಭಕ್ತಿ ಹೆಸರುಗಳಲ್ಲಿ 'ಕರ್ಮಕಾರಕ' ವಿಭಕ್ತಿ

ಎ) ದ್ವಿತೀಯ ಬಿ) ತೃತೀಯ ಸಿ) ಷಷ್ಠಿ ಡಿ) ಸಪ್ತಮಿ.

40. ಸಂಬಂಧಾರ್ಥಕಾವ್ಯಯಕ್ಕೆ ಉದಾಹರಣೆ ಇದು:

ಎ) ಅಹುದು ಬಿ) ಅದುವೇ ಸಿ) ಅಯ್ಯೋ ಡಿ) ಅಥವಾ.

ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೇಯ ಪದಕ್ಕೆ ಸರಿಹೊಂದುವ ಪದವನ್ನು ಬರೆಯಿರಿ. 4*1=4

41. ಬೇಗನೆ : ಸಾಮಾನ್ಯ ಆವ್ಯಯ :: ಅಂಜಿಕೆ:__________

42. ಮೊಟ್ಟಮೊದಲು : ದ್ವಿರುಕ್ತಿ :: ಸತಿ ಪತಿ :__________

43. ಅಬ್ಜೋದರ : ವಿಷ್ಣು :: ಘಟಸಂಭೂತ :__________

44. ವಿಜ್ಞಾಪನೆ : ಬಿನ್ನಾಣ :: ವಂಧ್ಯಾ :__________

ಈ ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3

45. ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೆ ನಿನಗೆ

ಅಥವಾ

"ಅತಿಕುಟಿಲ ಮನಂ ಧನಲು
ಬ್ಧತೆಯಿಂದಂ ದುಷ್ಟಬುದ್ಧಿ ನುಡಿದ ಪುಸಿಯಂ"

ಕೆಳಗಿನ ವಾಕ್ಯಗಳಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣದೊಂದಿಗೆ ಸಮನ್ವಯಿಸಿ

46. ನುಡಿದರೆ ಮುತ್ತಿನ ಹಾರದಂತಿರಬೇಕು

ಅಥವಾ

'ಮಾರಿಗೌತಣವಾಯ್ತು ನಾಳಿನ ಮಹಾಭಾರತವು'

## ವಿಭಾಗ –'ಸಿ'

47. ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1*3=3

- ಶಕ್ತಿಗಿಂತ ಯುಕ್ತಿ ಮೇಲು
- ಬೆಳೆಯುವ ಸಿರಿ ಮೊಳಕೆಯಲ್ಲಿ
- ಕಟ್ಟುವುದು ಕಠಿಣ, ಕೆಡುಸುವುದು ಸುಲಭ

48. ನಿಮ್ಮ ಶಾಲೆಯಲ್ಲಿ ಆಚರಿಸಿದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪತ್ರಿಕೆಯಲ್ಲಿ ಪ್ರಕಟಿಸಲು ಕೋರಿ 'ಕನ್ನಡಪ್ರಭ' ದಿನಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯಿರಿ.

ಅಥವಾ

ನೀವು ಕಲಬುರಗಿ ಸರ್ಕಾರಿ ಪ್ರೌಢ ಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿ ಹೇಮ ಎಂದು ಭಾವಿಸಿಕೊಂಡು ದಾವಣಗೆರೆ ಎಸ್.ಪಿ.ನಿಜಲಿಂಗಪ್ಪ ಬಡಾವಣೆಯಲ್ಲಿರುವ ನಿಮ್ಮ ತಾಯಿಯವರಿಗೆ ನಿಮ್ಮ ಹೊಸ ಪರೀಕ್ಷಾ ಪದ್ಧತಿಯನ್ನು ಕುರಿತು ಒಂದು ಪತ್ರ ಬರೆಯಿರಿ.

49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1*5=5

- ಸ್ವಚ್ಛ ಭಾರತ ಅಭಿಯಾನ
- ರಾಷ್ಟ್ರೀಯ ಭಾವೈಕ್ಯತೆ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ.
- ಮಕ್ಕಳ ವಿದ್ಯಾಭ್ಯಾಸದ ಮೇಲೆ ದೂರದರ್ಶನದ ದುಷ್ಪರಿಣಾಮಗಳು